೨) ವಿದ್ಯುತ್ ಮಗ್ಗಗಳ ಮೇಲೆ ತಯಾರಾಗುವ ಬಟ್ಟೆಗಳ ಉತ್ಪಾದನಾ ವೆಚ್ಚ ಕೈಮಗ್ಗ ಬಟ್ಟೆಗಳ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆಯಿದ್ದು ತೀವ್ರ ಪೈಪೋಟಿ ಅನುಸರಿಸಬೇಕಾಗಿದೆ.

೩) ಕಳೆದ ಎರಡು ವರ್ಷಗಳಿಂದ ರೇಷ್ಮೆ ಬೆಲೆ ಹೆಚ್ಚಿರುವುದರಿಂದ ಬಟ್ಟೆಗಳ ಬೆಲೆಯೂ ಹೆಚ್ಚಿರುತ್ತದೆ.

೪) ಶುದ್ಧವಾದ ಜರಿಯನ್ನು ಉಪಯೋಗಿಸಿ ಸೀರೆಗಳನ್ನು ತಯಾರಿಸಂತ್ತಿರುವುದರಿಂದ ಕೈಮಗ್ಗದ ಸೀರೆಗಳ ಬೆಲೆ ವಿದ್ಯುತ್ ಮಗ್ಗಗಳ ಸೀರೆಗಳಿಗಿಂತ (ಬೆಲೆಯಲ್ಲಿ) ಸ್ವಲ್ಪ ಹೆಚ್ಚಾಗಿರುತ್ತದೆ.

೫) ಕಳಪೆ ರೇಷ್ಮೆಯನ್ನು ನೇಕಾರರಿಗೆ ನಿಗಮವು ಸರಬರಾಜು ಮಾಡುತ್ತಿಲ್ಲ ಮತ್ತು ಇದಿಂದ ದಾಸ್ತಾನು ಉಳಿದಿಲ್ಲ.

೬) ನಿಗಮವು ರೇಷ್ಮೆಯನ್ನು ಸಕಾಲದಲ್ಲಿ ಸರಬರಾಜು ಮಾಡಲು ಸೂಕ್ತ ವ್ಯವಸ್ಥೆ ಮಾಡಿದೆ.

೭) ನಿಗಮದ ನೇಕಾರರಿಗೆ ಉತ್ತಮ ದರ್ಜೆಯ ರೇಷ್ಮೆಯನ್ನು ಅವಶ್ಯಕತೆಗೆ ಬೇಕಾದಷ್ಟು ಸರಬರಾಜು ಮಾಡುತ್ತಿದೆ.

೮) ಬಂದಿದೆ. ನಿಗಮವು ರೇಷ್ಮೆಯನ್ನು ಸರ್ಕಾರಿ ವಲಯ ದಿಂದಲೇ ಕೊಳ್ಳಬೇಕೆಂಬುದು ಕಡ್ಡಾಯವಲ್ಲ. ನಿಗಮವು ಸರ್ಕಾರಿ ವಲಯ ಮತ್ತು ಇತರರಿಂದಲೂ ರೇಷ್ಮೆ ನೂಲನ್ನು ಕೊಳ್ಳಬಹುದು.

೯) ಉತ್ತಮ ಗುಣವಂಟ್ಟದ ರೇಷ್ಮೆಯನ್ನೇ ತೆಗೆದುಕೊಳ್ಳಲಾಗುತ್ತಿದ್ದೇವೆ.

ಹೊಸದುರ್ಗ ತಾಲ್ಲೂಕಿನಲ್ಲಿ ಸಸಿ ನೆಡುವ ಕಾರ್ಯದ ಬಗ್ಗೆ.

೬೮೧. ಶ್ರೀ ಜಿ. ರಾಮದಾಸ್ (ಹೊಸದುರ್ಗ) —ಮಾನ್ಯ ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ಹೊಸದುರ್ಗ ತಾಲ್ಲೂಕಿನಲ್ಲಿ ವಲಯ ಹಾಗೂ ಸಾಮಾಜಿಕ ಅರಣ್ಯ ಇಲಾಖೆಯಿಂದ ಎಷ್ಟು ಲಕ್ಷ ಸಸಿಗಳನ್ನು ನೆಡಲು ಉದ್ದೇಶಿಸಲಾಗಿದೆ.

೨) ಈ ಯೋಜನೆಗಾಗಿ ಎಷ್ಟು ನರ್ಸರಿಗಳನ್ನು ತಾಲ್ಲೂಕಿನಲ್ಲಿ ಸ್ಥಾಪಿಸಲಾಗಿದೆ. ಇದರಲ್ಲಿ ಬೆಳೆಸಿದ ಗಿಡಗಳೆಷ್ಟು. ಇಲ್ಲಿ ಕೆಲಸ ಮಾಡುತ್ತಿರುವ ನೌಕರರು ಎಷ್ಟು ಜನರಿದ್ದಾರೆ ಇಲ್ಲಿ ಬೆಳೆದ ಗಿಡಗಳಲ್ಲಿ ಹೋಬಳಿವಾರು ಎಷ್ಟು ಗಿಡಗಳನ್ನು ವಿತರಣೆ ಮಾಡಲಾಗಿದೆ.

೩) ಇಲ್ಲಿನ ವನ ಮಹೋತ್ಸವದ ಅಂಗವಾಗಿ ಎಷ್ಟು ಗ್ರಾಮಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ!

೪) ಹಾಗಿದ್ದಲ್ಲಿ ಕಸಬಾ ಹೋಬಳಿ ಅರಳಿಹಳ್ಳಿ ಶಾಲಾ ಮೈದಾನದಲ್ಲಿ ಒಂದೂ ಸಾವಿರ ಗಂಧ ತೆಗೆದು ಸಸಿಗಳಿಗಾಗಿ ಕಾದರೂ ಗಿಡಗಳು ಸರಬರಾಜು ಮಾಡದೇ ಇರಲು ಕಾರಣವೇನು?

ಶ್ರೀ ಜೆ.ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

೧) ಹೊಸದುರ್ಗ ತಾಲ್ಲೂಕಿನಲ್ಲಿ ೧೯೮೬-೮೭ಕ್ಕೆ ಅರಣ್ಯ ಇಲಾಖೆಯಿಂದ ಪ್ರಾದೇಶಿಕ ವಲಯದಲ್ಲಿ ೫.೮೦,೦೦೦ ಸಸಿಗಳನ್ನು ಮತ್ತು ಸಾಮಾಜಿಕ ಅರಣ್ಯ ವಲಯದಲ್ಲಿ ೮,೧೫,೦೦೦ ಸಸಿಗಳನ್ನು ಬೆಳೆಸಲು ಯೋಜನೆ ಹಾಕಿಕೊಳ್ಳಲಾಗಿದೆ.

೨) ಅರಣ್ಯ ಇಲಾಖೆಯ ಮಂಜಿನಾಂತರ ಹೊಸದುರ್ಗ ತಾಲ್ಲೂಕಿನಲ್ಲಿ ಪ್ರಾದೇಶಿಕ ವಲಯದಿಂದ ೪ ಸರ್ಕಾರಿ ನರ್ಸರಿಗಳನ್ನು ಮತ್ತು ಸಾಮಾಜಿಕ ಅರಣ್ಯ ವಲಯದಿಂದ ೪ ಸರ್ಕಾರಿ ನರ್ಸರಿ ಮತ್ತು ೧೦ ಕಿಸಾನ್ ನರ್ಸರಿಯನ್ನು ಬೆಳೆಸಲಾಗಿದೆ.

ಪ್ರಾದೇಶಿಕ ವಲಯದಿಂದ ನಾಲ್ಕು ನರ್ಸರಿಯಲ್ಲಿ ೫,೮೦ ೦೦೦ ಸಸಿಗಳನ್ನು ಬೆಳೆಸಿದೆ. ಸಾಮಾಜಿಕ ಅರಣ್ಯ ವಲಯದಿಂದ ೧೪ ನರ್ಸರಿಗಳಲ್ಲಿ ೮,೧೨,೦೦೦ ಸಸಿಗಳನ್ನು ಬೆಳೆಸಲಾಗಿದೆ. ಈ ಸ್ಥ ಕ್ಷೇತ್ರದಲ್ಲಿ ೩೫ ಮಂತ್ರು ೩೮ ಜನರು ಕೆಲಸ ಮಾಡುತ್ತಿದ್ದಾರೆ.

ಈ ತಾಲ್ಲೂಕಿನಲ್ಲಿ ಬೆಳೆಸಿದ ಗಿಡಗಳಲ್ಲಿ ಕೆಳಗೆ ಕಾಣಿಸಿದಂತೆ ಸಸಿಗಳನ್ನು ಹೋಬಳಿವಾರು ವಿತರಣೆ ಮಾಡಲಾಗಿದೆ.

ಹೊಸದುರ್ಗ ಪ್ರಾದೇಶಿಕ ವಲಯದಲ್ಲಿ :

		ಸಸಿಗಳು
ಕಸಬಾ ಮತ್ತೋಡು ಹೋಬಳಿ	...	೭೮೦೦
ಮಾಡದಕೆರೆ ಹೋಬಳಿ	...	೧೦೦೦
ಶ್ರೀರಾಂಪುರ ಹೋಬಳಿ	...	೧೫೦೦೦
ಒಟ್ಟು	...	೨೩೦೦೦

ಹೊಸದುರ್ಗ ಸಾಮಾಜಿಕ ಅರಣ್ಯ ವಿಭಾಗದಲ್ಲಿ :

		ಸಸಿಗಳು
ಶ್ರೀರಾಂಪುರ ಹೋಬಳಿ	...	೪೫,೦೦೦
ಮತ್ತೋಡು ಹೋಬಳಿ	...	೧೫,೦೦೦
ಮಾಡದ ಕೆರೆ ಹೋಬಳಿ	...	೪೦,೦೦೦
ಹೊಸದುರ್ಗ ಹೋಬಳಿ	...	೧೫,೦೦೦
ಒಟ್ಟು	..	೧,೧೫,೦೦೦

೨) ಹೊಸದುರ್ಗ ಟೌನ್‌ನಲ್ಲಿ ೭ ಪ್ರದೇಶಗಳಲ್ಲಿ ಪಂತ್ತು ಹೊಸದುರ್ಗ ತಾಲ್ಲೂಕಿನಲ್ಲಿ ೧೦ ಗ್ರಾಮಗಳಲ್ಲಿ ವನಮಹೋತ್ಸವವನ್ನು ಆಚರಿಸಲಾಗಿದೆ.

ಹೊಸದುರ್ಗ ಟೌನ್

೧) ಪ್ರಥಮ ದರ್ಜೆ ಕಾಲೇಜು, ೨) ಸರ್ಕಾರಿ ಪ್ರಧಾನ ಕಿರಿಯ ಬಾಲಕರ ಪ್ರಾಥಮಿಕ ಪಾಠ ಶಾಲೆ ೩) ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಪಾಠಶಾಲೆ ೪) ಸರ್ಕಾರಿ ಮಾದರಿ ಬಾಲಕಿಯರ ಉನ್ನತ ಪ್ರಾಥಮಿಕ ಪಾಠಶಾಲೆ ೫) ಗಂಗಾಂಬಿಕ ಬಾಲಕಿಯರ ಪ್ರಾಥಮಿಕ ಶಾಲೆ ೬) ಸಿದ್ಧಾರ್ಥ ಬಾಲಕರ ಪಾಠಶಾಲೆ ೭) ಸರ್ಕಾರಿ ಹಿರಿಯ ಬಾಲಕರ ಪಾಠಶಾಲೆ, ಶ್ರೀರಾಂಪುರ.

ಹೊಸದುರ್ಗ ತಾಲ್ಲೂಕಿನ ಹಳ್ಳಿಗಳು

೧) ಹೊಸದುರ್ಗ ಟೌನ್ ೨) ಬುಕ್ಕಸಾಗರ ೩) ಶ್ರೀರಾಂಪುರ ೪) ಮಲ್ಲಪ್ಪನ ಹಳ್ಳಿ ೫) ಕಾರೇಹಳ್ಳಿ ೬) ಮದಂರೆ ೭) ಬಾಗೂರು ೮) ಹೊಸದುರ್ಗ ರೈಲ್ವೆ ನಿಲ್ದಾಣ ೯) ಅತ್ತಿಮೊಗೆ ೧೦) ನೇರಲಕೆರೆ.

ಈ) ಗಿಡ ನೆಡಲು ಆರಳಿಹಳ್ಳಿ ಶಾಲೆಯ ಆವರಣದಲ್ಲಿ ಗುಂಡಿ ತೆಗೆದಾಗ ಮಳೆಯು ಇಲ್ಲದ ಕಾರಣ ಗಿಡ ನೆಡಲು ವಿಳಂಬವಾಗಿದ್ದು, ಇದೀಗ ಬಂದ ವರದಿ ಪ್ರಕಾರ ತಾ. ೨೧-೮-೮೬ ರಂದು ಎಲ್ಲಾ ಗುಂಡಿಗಳಲ್ಲಿ ಗಿಡ ನೆಡಲಾಗಿದೆ.